ಮೇ - 1

ಮನುಷ್ಯ ಕುಮಾರನು ಸೇವೆ ಮಾಡಿಸಿಕೊಳ್ಳುವದಕ್ಕೆ ಬರಲಿಲ್ಲ. ಸೇವೆ ಮಾಡುವದಕ್ಕೂ.............. ಬಂದನು. -ಮತ್ತಾಯ 20:28

ನಾವು ಕರ್ತನಿಗಾಗಿ ಪ್ರತಿಷ್ಠೆಪಡಿಸಿಕೊಂಡಿದ್ದ ಮೇಲೆ ಕ್ರೈಸ್ತರಾದ ನಾವು ಮಾಡುವ ಎಲ್ಲಾ ನ್ಯಾಯವಾದ ಹಕ್ಕುಬಾಧ್ಯತೆ ಗಂಡಂದಿರ ಅಥವಾ ಮಕ್ಕಳ, ತಂದೆಯ ಅಥವಾ ತಾಯಿಯ, ನೆರೆಹೊರೆಯವರ ಅಥವಾ ಸ್ನೇಹಿತರ ಹಾಗೂ ಕ್ರೈಸ್ತ ಸಹೋದರ ಪರವಾಗಿ ಮಾಡುವಾಗ ಅದು ಕ್ರಿಸ್ತನಿಗೆ ಮಾಡಿದಂತಾಗುವದು. ಆದರೆ, ಇದೇ ಸೇವೆ ಬೇರೆ ಇನ್ನಾವುದೋ ಉದ್ದೇಶದಿಂದ ಮಾಡುವುದಾದರೆ, ಅಂದರೆ ಅವನು ಕ್ರಿಸ್ತನಲ್ಲಿ ಪ್ರತಿಷ್ಠೆಹೊಂದದವನಾಗಿಯೂ ನೀತಿವಂತನೆಂಬ ನಿರ್ಣಯ ಹೊಂದದವನಾಗಿದ್ದರೆ, ಅವನು ಮಾಡುವ ಸೇವೆ ವ್ಯಕ್ತಿಗೆ ಸೀಮಿತವಾಗಿರುವದಲ್ಲದೆ, ಕರ್ತನಿಗಾಗಿಯಲ್ಲ. ಇವುಗಳು ಯಾವದೂ ಕರ್ತನ ಹಿಂಬಾಲಕರಿಗೆ ತಾವು ಮಾಡಿದ್ದು ತ್ಯಾಗ ಎನಿಸಿಕೊಳ್ಳದು-Z ’03, 407 (ಖ 3265).

* * *                * * *                * * *

ಮೇ - 2

ಕ್ರಿಸ್ತ ಯೇಸುವಿನಲ್ಲಿ ಸದ್ಭಕ್ತರಾಗಿ ಜೀವಿಸುವದಕ್ಕೆ ಮನಸ್ಸು ಮಾಡುವವರೆಲ್ಲರೂ ಹಿಂಸೆಗೊಳಗಾಗುವರು. -2 ತಿಮೋಥಿ 3:12

ವಿರೋಧ ನಿರೀಕ್ಷಿತ, ಆದರೂ ಈ ವಿರೋಧ ಮರಣದ ಪರ್ಯಂತ ಮುಂದುವರೆಯುವದು. ಈ ವಿರೋಧಕ್ಕೆ ನಮ್ಮನ್ನು ನಾವು ತಾಳ್ಮೆಯಿಂದ ಒಳಪಡಿಸುವಾಗ ನಾವು ಸ್ವಾಭಾವಿಕವಾಗಿ ಅನುಭವಿಸಬಹುದಾದ ಸ್ನೇಹ ಮತ್ತು ಈ ಜೀವನದ ಸಂತೋಷವನ್ನು ತ್ಯಾಗ ಮಾಡÀಬೇಕಾಗುತ್ತದೆ ಮತ್ತು ಕ್ರಿಸ್ತನ ಒಳ್ಳೇ ಸೈನಿಕನಾಗಿ ಬರುವಂತ ಎಲ್ಲಾ ಸಂಕಷ್ಟ ಸಂಗತಿಗಳನ್ನು ತಾಳಬೇಕಾಗುವುದು. ನಾವು ಕರ್ತನ ಚಿತ್ತ ಮತ್ತು ದೇವರ ರಾಜ್ಯದ ವಿಷಯವಾದ ಸತ್ಯವನ್ನು ಪ್ರಚಾರ ಮಾಡುವಾಗ ಈ ಸಂಕಷ್ಟಗಳು, ಹಿಂಸೆಗಳು ಯಾವ ವಿಧದಲ್ಲಾದರೂ ಬರಬಹುದು. ನಾವು ನಿಜವಾಗಿಯೂ ಕ್ರಿಸ್ತನ ಸೇವೆಯಲ್ಲಿ ನಮ್ಮನ್ನು ತೊಡಗಿಸಿಕೊಂಡಾಗ ಮೊದಲನೆಯದು, ನಾವು ಬಹು ಎಚ್ಚರಿಕೆಯಿಂದ ದೇವರ ಯೋಜನೆಯನ್ನು ಅಧ್ಯಯನ ಮಾಡುವದು; ಎರಡನೆದಾಗಿ ಅದರ ನಡೆಸುವಿಕೆ ಮತ್ತು ಅದರಲ್ಲಿರುವ ಅರ್ಥಗಳನ್ನು ಗ್ರಹಿಸುವದು; ಮೂರನೆದಾಗಿ ಉತ್ಸುಕತೆಯಿಂದಲೂ ಮತ್ತು ಆಸಕ್ತಿಯಿಂದಲೂ ನಮ್ಮಲ್ಲಿರುವ ಸಾಮರ್ಥ್ಯಕ್ಕೆ ತಕ್ಕಂತೆ ಕಾರ್ಯ ಸಾಧಿಸಿ ಸಿದ್ದಿಗೆ ಬರಲು ಯಾವ ತ್ಯಾಗ ಮಾಡಲಿಕ್ಕೂ ಸಿದ್ಧರಾಗಬೇಕು-Z ’03, 164, 165 (ಖ 3199).

* * *                * * *                * * *

ಮೇ - 3

ಗಟ್ಟಿಯಾದ ಆಹಾರವು ಪ್ರಾಯಸ್ತರಿಗೋಸ್ಕರ ಅಂದರೆ, ಜ್ಞಾನೇಂದ್ರಿಯಗಳನ್ನು ಸಾಧನೆಯಿಂದ ಶಿಕ್ಷಿಸಿಕೊಂಡು ಇದು ಒಳ್ಳೇದು, ಅದು ಕೆಟ್ಟದ್ದು ಎಂಬ ಭೇದವನ್ನು ತಿಳಿದವರಿಗೋಸ್ಕರ.

-ಇಬ್ರಿಯ 5:14

ಯಾರು ದೇವರಲ್ಲಿ ನಿಜವಾದ ಮತ್ತು ನಿಷ್ಕಪಟವಾದ ನಂಬಿಕೆ ಇಟ್ಟಿರುವರೊ ಅವರು ಹೃದಯಪೂರ್ವಕವಾಗಿ ಆತನ ವಾಕ್ಯವನ್ನು ಅಂಗೀಕರಿಸಿರುವರು. ಇವರಲ್ಲಿ ದೇವರ ಪ್ರಾಥಮಿಕ ಸೂತ್ರಗಳು ಮತ್ತು ಬೋಧನೆಗಳು ಸ್ಥಾಪನೆಯಾಗಿದ್ದು, ಅದರ ಮೇಲೆ ಚಿನ್ನ, ಬೆಳ್ಳಿ ಮತ್ತು ವಜ್ರ ವೈಡೂರ್ಯಗಳಿಂದ ಭವ್ಯವಾದ ಕಟ್ಟಡ ನಿರ್ಮಾಣವಾಗುವ ಕಾರ್ಯ ತಡೆಯಿಲ್ಲದೆ ಸಾಗುತ್ತಿರುವದು. ಇಂಥವರು ದೇವರಿಗೆ ಪ್ರಾಮಾಣಿಕರಾಗಿದ್ದುಕೊಂಡು ಒಳ್ಳೇದರ ಮತ್ತು ಕೆಟ್ಟದ್ದರ ಭೇದವನ್ನರಿತಿರುವರು. ನಾವು ಯಾವದನ್ನು ಅರಿತಿರುವೆವೊ ಅದನ್ನು ನಂಬುತ್ತೇವೆ ಮತ್ತು ಏಕೆ ನಂಬುತ್ತೇವೆ ಎಂಬುದನ್ನು ಧೈರ್ಯದಿಂದ, ಅದಕ್ಕೆ ಯಾವದನ್ನೂ ಹೊಂದಾಣಿಕೆ ಮಾಡದೆ ಘೋಷಿಸುತ್ತೇವೆ. ತುತೂರಿಯು ಯಾವುದೋ ಶಬ್ದವನ್ನು ಮಾಡಿದರೆ, ಸೈನಿಕನು ಯುದ್ಧದಲ್ಲಿ ಹೋರಾಡಲು ಸಜ್ಜಾಗುವನೋ?-Z ’03, 167 (ಖ 3199).

* * *  * * *  * * *

ಮೇ - 4

ಯೆಹೋವನು ಮನುಷ್ಯರಂತೆ ಹೊರಗಿನ ತೋರಿಕೆಯನ್ನು ನೋಡದೆ ಹೃದಯವನ್ನೇ ನೋಡುವವನಾಗಿದ್ದಾನೆ ಅಂದನು. -1ಸಮುವೇಲ 16:7

ದೇವರು ನಮ್ಮ ಮನಸ್ಸು, ಚಿತ್ತ, ಹೃದಯವನ್ನು ನೋಡುವನು ಎಂಬದನ್ನು ಮರೆತು ನಮ್ಮನ್ನು ನಾವು ಶಾರೀರಿಕ ದೃಷ್ಟಿಯಲ್ಲಿ ನೋಡುವವರಾಗಿ, ಹಾಗೆಯೇ ದೇವರು ಕೂಡ ನೋಡುತ್ತಾನೆ ಎಂಬದಾಗಿ ತಿಳಿದರೆ, ನಾವು ಆ ತಿಳುವಳಿಕೆಗೆ ತಕ್ಕಂತೆ ಕತ್ತಲೆಗೂ ಗಲಿಬಿಲಿಗೂ ಮತ್ತು ನಿರಾಶೆಗೂ ಒಳಗಾಗುವೆವು. ನಮ್ಮ ಚಿತ್ತ, ಹೃದಯ ನೀತಿಯ ನಿಮಿತ್ತ ಜೀವಂತವಾಗಿದೆ; ದೇವರೊಂದಿಗೆ ಸಮಾಧಾನದ ಸ್ಥಿತಿಯಲ್ಲಿದೆ ಎಂಬುದನ್ನು ಮರೆಯಬಾರದು. ಹೀಗಿರುವಲ್ಲಿ ನಮ್ಮ ಉದ್ದೇಶ ಮತ್ತು ಚಿತ್ತದ ವಿಷಯದಲ್ಲಿ ನಾವು ಆಲಸ್ಯವಾಗಿರದೆ ನಮ್ಮ ಜೀವಿತವನ್ನು ಅದರಂತೆಯೇ ನಡಿಸಿಕೊಂಡು ಹೋಗಬೇಕು. ಅದನ್ನು ಬಿಟ್ಟು ಬೇರೆ ರೀತಿಯಲ್ಲಿ ನಡೆಯುವ ಪಕ್ಷಕ್ಕೆ ನಮ್ಮ ಆತ್ಮೀಕ ಜೀವನವನ್ನು ಕಳಕೊಳ್ಳುತ್ತೇವೆ. ನಮ್ಮ ಹೃದಯ ಅಥವ ಚಿತ್ತವನ್ನು ಸರಿಯಾಗಿರಿಸಿಕೊಳ್ಳುವದು ಕಷ್ಟವೇನಲ್ಲ. ನಮ್ಮ ಚಿತ್ತ ಮತ್ತು ಹೃದಯವನ್ನು ಪ್ರಾಮಾಣಿಕವಾಗಿಟ್ಟುಕೊಳ್ಳುವುದನ್ನು ಕ್ರಿಸ್ತನು ಹಾಗೂ ದೇವರು ಅನುಮೋದಿಸುವರು-Z ’03, 171 (ಖ 3200).

* * *  * * *  * * *

ಮೇ - 5

ನೀವು ಶರೀರ ಭಾವವನ್ನು ಅನುಸರಿಸಿ ಬದುಕಿದರೆ ಸಾಯುವುದು ನಿಶ್ಚಯ; ನೀವು ಪವಿತ್ರಾತ್ಮನಿಂದ ದೇಹದ ದುರಭ್ಯಾಸಗಳನ್ನು ನಾಶ ಮಾಡುವದಾದರೆ ಜೀವಿಸುವಿರಿ.

-ರೋಮಾಪುರ 8:13

ಕರ್ತನ ಸಂಸರ್ಗದಲ್ಲಿ ಮತ್ತು ಮಹಿಮೆಯುಳ್ಳ ಪುನರುತ್ಥಾನದಲ್ಲಿ ಭಾಗಿಗಳಾಗಬೇಕಾದರೆ ಕೆಲವು ಶರತ್ತುಗಳನ್ನು ಪೂರೈಸಬೇಕಾಗಿದೆ. ಅದಾವುದಂದರೆ, ನಾವು ನಮ್ಮ ದೇಹದ ಸ್ವಾಭಾವಿಕ ಕರ್ಮಗಳನ್ನು ನಿಷ್ಕ್ರಿಯಗೊಳಿಸಬೇಕು. ಕರ್ಮಗಳು ಜೀವಂತವಾಗಿರದಂತೆ, ಅದನ್ನು ಸಂಹರಿಸಿ ಶಿಲುಬೆಗೆ ಹಾಕಿ ಕ್ರಿಸ್ತನ ಸೇವೆಯಲ್ಲಿ ನಿರತರಾಗಬೇಕು. ದೇಹದ ಕರ್ಮಗಳನ್ನು ಕೊಲ್ಲಬೇಕಾದರೆ, ಅದರ ವಿರುದ್ಧ ಹೋರಾಡಬೇಕು. ಅಪೋಸ್ತಲನು ಹೇಳುವುದೇನಂದರೆ, ದೇಹವು ಆತ್ಮನಿಗೆ ವಿರುದ್ಧವಾಗಿ ಹೋರಾಡುತ್ತದೆ. ಆತ್ಮನು ದೇಹದ ವಿರುದ್ಧ ಹೋರಾಡುವದು ಎಂಬದಾಗಿ, ಈ ಹೋರಾಟವು ಜೀವವಿರುವವರೆಗೂ ನಡೆಯುತ್ತಲೇ ಇರುವದು. ಯಾರು ಈ ಹೋರಾಟವನ್ನು ತನ್ನ ಸಾಮರ್ಥ್ಯಕ್ಕನುಸಾರ ಸಾಯುವವರೆಗೂ ಮಾಡುವರೋ ಅಂತವರನ್ನು ದೇವರು ಕರ್ತನು ಕೊಟ್ಟ ವಿಮೋಚನ ಯಜ್ಞದ ಅನ್ವಯ ಜಯಶಾಲಿಯಾದನು ಎಂಬುದಾಗಿ ನಿರ್ಣಯಿಸುವನು-Z ’03, 172 (ಖ 3200).

* * *    * * *    * * *

ಮೇ - 6

ಯಾರಾರು ದೇವರ ಆತ್ಮನಿಂದ ನಡೆಸಿಕೊಳ್ಳುತ್ತಾರೋ, ಅವರು ದೇವರ ಮಕ್ಕಳು.

-ರೋಮಾಪುರ 8:14

ನಾವು ನಮ್ಮ ನಿಜವಾದ ಸ್ಥಾನದಲ್ಲಿ ಇರುವದನ್ನು ತಿಳಿಯಲು ಇದು ಒಂದು ಮಾರ್ಗಸೂಚಿಯಾಗಿದೆ. ಈ ತಿಳುವಳಿಕೆ ನಾವು ಓಟವನ್ನು ಪ್ರಾರಂಭಿಸಿದಾಗ ಮಾತ್ರವಲ್ಲದೆ, ಕೊನೆಗಾಣಿಸುವವರೆಗೂ ನಮ್ಮನ್ನು ದೇವರ ಆತ್ಮನು ನಡೆಸುವ ಪಕ್ಷಕ್ಕೆ ಅದು ನಡೆಸುವ ದಿಕ್ಕನ್ನು ನಾವು ಅನುಸರಿಸಿ ನಡೆಯುವದಾದರೆ, ಅದನ್ನು ಜಯಿಸುವದಾದರೆ, ಆಗ ನಾವು ದೇವರ ಮಕ್ಕಳಾಗುವೆವು. ಅಂದರೆ, ನಾವು ಕ್ರಿಸ್ತನು ಅರ್ಪಿಸಿದ ಯಜ್ಞದ ಫಲದಲ್ಲಿ ನಂಬಿಕೆಯಿಟ್ಟು ಅದೆ ಸ್ಥಿತಿಯನ್ನು ಹೃದಯಪೂರ್ವಕವಾಗಿ ಮುಂದುವರಿಸುವದಾದರೆ, ದೇವರು ನಮ್ಮನ್ನು ತನ್ನವರೆಂದು ಅಂಗೀಕರಿಸುವನು-Z ’03, 173 (ಖ 3200).

* * *    * * *    * * *

ಮೇ - 7

ನಾನು ಸುವಾರ್ತೆಯನ್ನು .................... ಸಾರದಿದ್ದರೆ, ನನ್ನ ಗತಿಯನ್ನು ಏನು ಹೇಳಲಿ.

-1ಕೊರಿಂಥ 9:16

ನಾವು ಹೊಂದಿರುವ ಈ ಶುಭ ಸಮಾಚಾರವನ್ನು ಇತರರಿಗೆ ಸಾರಲು ತಪ್ಪುವವರಾಗಿರಬಾರದು. ನರಳುತ್ತಿರುವ ಮಾನವ ಜನಾಂಗದವರ ಬಗ್ಗೆ ನಮಗೆ ಅನುಕಂಪವಿದ್ದು, ಕರ್ತನು ಮಾಡಿರುವ ದೇವರ ರಾಜ್ಯದ ವಾಗ್ದಾನವನ್ನು ಮತ್ತು ಆ ರಾಜ್ಯದಲ್ಲಿ ಎಲ್ಲಾ ಕುಟುಂಬದವರಿಗೆ ದೇವರು ಅನುಗ್ರಹಿಸುವ ಆಶೀರ್ವಾದವನ್ನು ತಿಳಿಸಲು ಸದಾ ಉತ್ಸುಕರಾಗಿರಬೇಕು. ಯಾರು ಈ ಶುಭ ಸಮಾಚಾರವನ್ನು ದಿನ ನಿತ್ಯವು ಒದಗಿ ಬರುವ ಅವಕಾಶಗಳಿಗನುಸಾರ ಪ್ರಚಾರಮಾಡಲು, ಸ್ವಾರ್ಥತೆಯಿಂದಲೋ ಅಥವಾ ಜ್ಞಾನದ ಕೊರತೆಯಿಂದಲೋ ಅಥವ ನಂಬಿಕೆಯಲ್ಲಿ ಕೊರತೆಯುಳ್ಳವನಾಗಿಯೋ ಹಿಂತೆಗೆಯುವನನ್ನು ಕರ್ತನು ಎಂದಿಗೂ ಮೆಚ್ಚುವದಿಲ್ಲ ಮತ್ತು ಅವನು ಹಾಗೆಯೇ ಮುಂದುವರೆಯುವನಾದರೆ, ದೇವರ ರಾಜ್ಯದಲ್ಲಿ ಪಾಲಿಲ್ಲದವನಾಗುವನು-Z ’03, 174 (ಖ 3204).

* * *  * * *  * * *

ಮೇ - 8

ಕ್ರಿಸ್ತನು ತಾನು ಕೊಡುತ್ತೇನೆಂದು ನಮಗೆ ವಾಗ್ದಾನ ಮಾಡಿದ್ದು, ನಿತ್ಯ ಜೀವವು.

-1ಯೋಹಾನ 2:25

ದೇವರು ನಮಗೋಸ್ಕರ ಮಾಡಿರುವ ಕೃಪಾಪೂರ್ಣ ವಾಗ್ದಾನಗಳನ್ನು ಸ್ಮರಿಸುವುದಾದರೆ, ನಾವು ದೇವರಿಗಾಗಿ ಏನು ಮಾಡಬೇಕೆಂಬದನ್ನು ತಿಳಿಯಲು ಸಾಧ್ಯವಾಗುತ್ತೆ. ಈಗಿನ ಜೀವನಕ್ಕೆ ಅವಶ್ಯಕವಾಗಿ ಬೇಕಾಗಿರುವ ನೀರು ಆಹಾರವನ್ನು ದೇವರು ಒದಗಿಸುತ್ತೇನೆಂದು ವಾಗ್ದಾನ ಮಾಡಿದ್ದಾನೆ. ಆದರೂ ನಾವು ಇವುಗಳನ್ನು ಪಡೆಯಲು, ಒದಗಿ ಬರುವ ಎಲ್ಲಾ ಅವಕಾಶಗಳನ್ನು ಕಡೆಗಣಿಸಬಾರದು. ನಮಗೆ ದೇವರ ರಾಜ್ಯದಲ್ಲಿ ಪಾಲುಕೊಡುತ್ತೇನೆಂದು ದೇವರು ವಾಗ್ದಾನ ಮಾಡಿರುವನು. ಅದನ್ನು ಪಡೆಯಲು ನಮ್ಮ ಕರೆ ಆರಿಸುವಿಕೆಯನ್ನು ರುಜುಪಡಿಸಿಕೊಳ್ಳಬೇಕು. ದೇವರು ನಮ್ಮ ಬಗ್ಗೆ ಮಾಡಬೇಕಾಗಿರುವ ಕಾರ್ಯವನ್ನು ಮಾಡಲು ಸದಾ ಸಿದ್ದನಾಗಿರುವನು. ಹಾಗೆಯೇ, ನಮ್ಮ ಪ್ರಯೋಜನಕ್ಕಾಗಿ ನಮ್ಮ ಕ್ರಿಯೆಗಳನ್ನು ನಂಬಿಕೆಯ ಮೂಲಕ ತೋರಿಸಬೇಕೆಂದು ಕರೆಕೊಟ್ಟಿದ್ದಾನೆ. ಹಾಗೂ ನಾವು ಎಲ್ಲಾ ನ್ಯಾಯವಾದ ರೀತಿಯಲ್ಲಿ ದೇವರೊಂದಿಗೆ ಸಹಕರಿಸಿ ಮಾಡುವ ಕಾರ್ಯಗಳನ್ನು ಕೂಡ ದೇವರು ಇಷ್ಟಪಡುತ್ತಾನೆ-Z ’03, 175 (ಖ 3204).

* * *  * * *  * * *

ಮೇ - 9

ಆದದರಿಂದ, ನೀವು ಕರ್ತನಾದ ಯೇಸುವೆಂಬ ಕ್ರಿಸ್ತನನ್ನು ಅಂಗೀಕರಿಸಿದಂತೆಯೇ ಆತನಲ್ಲಿದ್ದವರಾಗಿ ನಡೆದುಕೊಳ್ಳಿರಿ. ಆತನಲ್ಲಿ ಬೇರೂರಿಕೊಂಡು ಭಕ್ತಿ ವೃದ್ಧಿಯನ್ನು ಹೊಂದಿ ನಿಮಗೆ ಬೋಧಿಸಲ್ಪಟ್ಟ ಉಪದೇಶದ ಪ್ರಕಾರವೇ ಕ್ರಿಸ್ತನಲ್ಲಿ ನೆಲೆಗೊಂಡು ದೇವರಿಗೆ ಹೆಚ್ಚೆಚ್ಚಾಗಿ ಸ್ತೋತ್ರ ಮಾಡುವವರಾಗಿರಿ. -ಕೊಲೊಸ್ಸೆ 2:6,7

ತಪ್ಪು ಬೋಧನೆ ಮಾಡುವವರು ಹೇಳುವದೇನಂದರೆ, ನಂಬಿಕೆಯಲ್ಲಿ ಬೇರೂರಿಕೊಂಡು ವೃದ್ಧಿಯಾಗುವದು ಅನಾವಶ್ಯಕ ಮತ್ತು ಸರಿಯಾದುದಲ್ಲ. ಏಕೆಂದರೆ, ಅದು ಒಬ್ಬ ವ್ಯಕ್ತಿಯನ್ನು ಮತಾಂಧನನ್ನಾಗಿಸುತ್ತೆ ಎಂಬುದು. ಇವರು ತರ್ಕಬದ್ಧವಾಗಿಯೂ ಮತ್ತು ಸತ್ಯವೇದದ ಆಧಾರದಿಂದ ರುಜುಪಡಿಸಲು ಸಾಧ್ಯವಾಗದೆ ಇರುವದನ್ನ ಸ್ವಸ್ತ ಮನಸ್ಸಿಲ್ಲದವನು ಒಪ್ಪಿಕೊಂಡು ಅದಕ್ಕೆ ಅಂಟಿಕೊಳ್ಳುವನು. ಆದರೆ, ಯಾವನು ಸತ್ಯವೇದ ಮತ್ತು ಅದರಲ್ಲಿರುವ ದೇವರ ವಾಕ್ಯಗಳಲ್ಲಿ ಸಾಮಾನ್ಯ ನಂಬಿಕೆಯಿಟ್ಟು ಅದನ್ನು ಅಂಗೀಕರಿಸುವನೋ ಅವನು ಮತಾಂಧನಲ್ಲ. ಆದರೆ, ಕಾಲಕ್ರಮೇಣ ದೈವ ವಾಕ್ಯದಲ್ಲಿ ಅಡಗಿರುವ ಸತ್ಯ ಬೋಧನೆಗಳನ್ನು ಸ್ವಸ್ಥ ಮನಸ್ಸಿನಿಂದ ಅಂಗೀಕರಿಸಿ ಸತ್ಯದಲ್ಲಿ ಬಲವಾಗಿ ಬೇರೂರಿ ಅಭಿವೃದ್ಧಿಯಾಗುವನು. ಸತ್ಯದಲ್ಲಿ ಬೇರೂರಿ ಭಕ್ತಿವೃದ್ಧಿಯನ್ನು ರೂಢಿಸಿಕೊಂಡಿರುವ ಕ್ರಿಸ್ತ ಭಕ್ತನಿಗೂ, ಮತಾಂಧನಿಗೂ ಇರುವ ವ್ಯತ್ಯಾಸವೇನಂದರೆ, ಕ್ರಿಸ್ತ ಭಕ್ತನು ಸತ್ಯದಲ್ಲಿ ನೆಲೆಗೊಂಡಿರುವನು. ಮತಾಂಧನು ಅಸತ್ಯ ಮತ್ತು ತಪ್ಪಾದ ಬೋಧನೆಯಲ್ಲಿರುವನು-Z ’03, 199 (ಖ 3215).

* * *　　* * *　　* * *

ಮೇ - 10

ನನ್ನ ತಲೆಗೆ ತೈಲವನ್ನು ಹಚ್ಚಿಸುತ್ತೀ. ನನ್ನ ಪಾತ್ರೆಯು ತುಂಬಿ ಹೊರಸೂಸುತ್ತದೆ.

-ಕೀರ್ತನೆ 23:5

ಪಾತ್ರೆ ತುಂಬಿ ಹೊರಸೂಸುವದು ಎಂಬುದಕ್ಕೆ ಎರಡು ಅಭಿಪ್ರಾಯಗಳಿವೆ. ಸಂತೋಷದ ಪಾತ್ರೆ, ದುಃಖದ ಪಾತ್ರೆ ಈ ಎರಡು ಅರ್ಥದಲ್ಲಿ ಅದು ತುಂಬಿ ಹೊರಸೂಸುತ್ತದೆ. ಕರ್ತನ ಸಂತೋಷದ ಪಾತ್ರೆಯಲ್ಲಿ ಭಾಗವಹಿಸುವವನು ಹಿಂಸೆಯಲ್ಲಿಯೂ ಭಾಗವಹಿಸಬೇಕು. ಆತನೊಂದಿಗೆ ಆಳಬೇಕಾದರೆ, ಆತನೊಂದಿಗೆ ಹಿಂಸೆಯಲ್ಲಿ ಪಾಲುಗಾರರಾಗಬೇಕು. ಭವಿಷ್ಯದಲ್ಲಿ ನಮಗೆ ದೊರಕುವ ಮಹಿಮೆಯುಳ್ಳ ಪದವಿಯನ್ನು ನೆನಸಿಕೊಂಡು ಈಗಿನ ಕಾಲದ ಹಿಂಸೆ ಸಂಕಟವನ್ನು ಅಲ್ಪವೆಂದೆಣಿಸುತ್ತೇವೆ. ಹೀಗಿರುವದರಿಂದ ನಾವು ಸಂಕಟಪಡುತ್ತಿರುವಾಗಲು ಸಂತೋಷ ಉಳ್ಳವರಾಗಿರುವೆವು. ಹೇಗೆ ಸಂಕಟ ಹಿಂಸೆ ತುಂಬಿ ಹೊರಸೂಸುತ್ತದೊ, ಹಾಗೆಯೇ, ಸಂತೋಷವು ತುಂಬಿ ತುಳುಕುವದು. ಹೀಗಿರುವಾಗ ನಾವು ಅಪೋಸ್ತಲನೊಂದಿಗೆ ಯಾವಾಗಲೂ ಕರ್ತನಲ್ಲಿ ಸಂತೋಷಿಸಿರಿ, ಸಂತೋಷಪಡಿರಿ ಎಂದು ತಿರುಗಿ ಹೇಳುತ್ತೇನೆ ಎಂಬುದಾಗಿ ಹೇಳಬಹುದು-Z ’03, 413 (ಖ 3268).

* * *　　* * *　　* * *

ಮೇ - 11

ದೇವರೇ, ನಾವು ನಿನ್ನ ನಿಮಿತ್ತ ದಿನವೆಲ್ಲಾ ಕೊಲೆಗೆ ಗುರಿಯಾಗಿದ್ದೇವೆ; ಜನರು ನಮ್ಮನ್ನು ಕೊಯ್ಯುರಿಗಳಂತೆ ಎಣಿಸಿದ್ದಾರೆ. -ಕೀರ್ತನೆ 44:22

ನಾವು ಒಂದೇ ಒಂದು ತ್ಯಾಗದ ವಿಷಯವಾಗಿ ಜ್ಞಾಪಕ ಮಾಡಿಕೊಳ್ಳಬೇಕು. ಅದು ಕರ್ತನಿಗೆ ನಾವು ಪ್ರತಿನಿತ್ಯ ಮಾಡುವ ಸೇವೆ, ನಮಗೆ ಒದಗಿ ಬರುವ ಅವಕಾಶಗಳನ್ನು ಸದುಪಯೋಗಪಡಿಸಿಕೊಂಡು ಸೇವೆ ಮಾಡುತ್ತಾ ಅದನ್ನು ಅಭಿವೃದ್ಧಿಪಡಿಸುವದಾಗಿದೆ. ಆ ಸೇವೆಯಲ್ಲಿ ಸಣ್ಣಪುಟ್ಟ ಸೇವೆಯೂ ಸೇರಿರುವದು. ಅವುಗಳನ್ನು ಕೂಡ ನಾವು ಜ್ಞಾಪಿಸಿಕೊಳ್ಳತಕ್ಕದ್ದು. ಕೆಲವು ವೇಳೆ ಅದನ್ನು ಗಣನೆಗೆ ತೆಗೆದುಕೊಳ್ಳಲಾರದಷ್ಟು ಕನಿಷ್ಠ ಸೇವೆಯೇ ಆಗಿರಬಹುದು. ಆದರೂ ಇವೆಲ್ಲ ಸೇರಿ ಆ ಒಂದು ಮಹಾ ಸೇವೆಯಾಗಿದೆ. ನಾವು ನಮ್ಮನ್ನು ಕರ್ತನಿಗೆ ಪ್ರತಿಷ್ಠಿಸಿಕೊಂಡು ಆತನ ಕುಟುಂಬಕ್ಕೆ ಸೇರಿ ಪ್ರಾರಂಭಿಸಿದ ಆ ಒಂದೇ ಸೇವೆಯಲ್ಲಿ ಎಲ್ಲವು ಅಡಕವಾಗಿ ಆ ಸೇವೆ ಸಂಪೂರ್ಣವಾಗುವದು. ಯಾವಾಗ ನಾವು ನಮ್ಮ ಮನಸ್ಸನ್ನು ಕರ್ತನಿಗೆ ಒಪ್ಪಿಸಿದೆವೋ ಆಗ ನಾವು ಎಲ್ಲವನ್ನು ಒಪ್ಪಿಸಿದಂತಾಯ್ತು ನಾವು ಯಾವದನ್ನೂ ಕಡೆಗಣಿಸಲಿಕ್ಕಾಗದು; ಯಾವದನ್ನೂ ತಡೆಹಿಡಿಯಲಾಗದು. ನಮ್ಮ ಸೇವೆಯು ಜೀವನದಲ್ಲಿ ಎಷ್ಟು ಕನಿಷ್ಠವಾಗಿದ್ದರೂ ನಾವು ಎಲ್ಲವನ್ನು ಕರ್ತನ ಸೇವೆಯಲ್ಲಿ ತೊಡಗಿಸಿಕೊಂಡು ಆತನ ಮೆಚ್ಚುಗೆಗೆ ಪಾತ್ರರಾಗಬೇಕು-Z '03, 408 (ಖ 3265).

* * *　　* * *　　* * *

ಮೇ - 12

ಪ್ರಿಯರೇ, ಈ ವಾಗ್ದಾನಗಳು ನಮಗಿರುವದರಿಂದ ನಾವು ಶರೀರಾತ್ಮಗಳ ಕಲ್ಮಶವನ್ನು ತೊಲಗಿಸಿ ನಮ್ಮನ್ನು ಶುಚಿಮಾಡಿಕೊಂಡು ದೇವರ ಭಯದಿಂದ ಕೂಡಿದವರಾಗಿ ಪವಿತ್ರತ್ವವನ್ನು ಸಿದ್ಧಿಗೆ ತರುವದಕ್ಕೆ ಪ್ರಯತ್ನಿಸೋಣ. -2ಕೊರಿಂಥ 7:1

ದೇವರ ರಾಜ್ಯಕ್ಕೆ ಬಾಧ್ಯರಾಗಲು ಕರೆಯಲ್ಪಟ್ಟ ಭಾವಿ ಸದಸ್ಯರಲ್ಲಿ ಎಷ್ಟು ಮಂದಿ ಈ ರೀತಿ ಕಲ್ಮಶವನ್ನು ಹೊಂದಿಲ್ಲ. ಹೊಟ್ಟೆಕಿಚ್ಚು, ಡಂಬ, ಕಪಟತನ, ವೈರತ್ವ, ಕೆಟ್ಟ ಮಾತುಗಳು. ಇವೆಲ್ಲವೂ ಒಟ್ಟಿಗೆ ಇಲ್ಲದಿದ್ದರು ಒಂದಾದರು ಇರುತ್ತದೆ. ಈ ಬಲಹೀನತೆ ಕ್ರಿಸ್ತ ಭಕ್ತನ ಜೀವನದ ಪ್ರಾರಂಭದಲ್ಲಿ ಇರುವದಾಗಿದ್ದರು ಹೋರಾಟ ಮಾಡಬೇಕಾಗುವದು. ಈ ಎಲ್ಲಾ ದುರ್ಗುಣಗಳನ್ನು ಎಚ್ಚರಿಕೆ ವಹಿಸಿ ತೊಲಗಿಸಬೇಕಾಗಿದೆ. ಪ್ರತಿಯೊಬ್ಬನು ತನ್ನ ಜೀವನದಲ್ಲಿ ನಡೆ, ನುಡಿ ಕ್ರಿಯೆಗಳನ್ನು ಪರಿಶೀಲಿಸಿ ಅದರ ಹಿಂದೆ ಇರುವಂತ ಪ್ರೇರಣೆ, ಯೋಚನೆಯನ್ನು ಶೀಘ್ರವಾಗಿ ಗುರುತಿಸಿ ತಿಳುಕೊಂಡು ತಕ್ಷಣ ವಿಸರ್ಜಿಸಲು, ತೊಲಗಿಸಲು ಪ್ರಾಮಾಣಿಕವಾಗಿ ಪ್ರಯತ್ನಿಸಬೇಕು. ಹೀಗೆ ಶರೀರಾತ್ಮಗಳ ಕಲ್ಮಶವನ್ನು ತೊಲಗಿಸಿ ನಮ್ಮನ್ನು ಶುದ್ಧಮಾಡಿಕೊಳ್ಳುವದನ್ನು ಕರ್ತನು ಮೆಚ್ಚುತ್ತಾನೆ-Z '03, 408 (ಖ 3265).

* * *　　* * *　　* * *

ಮೇ - 13

ಯಜ್ಞವನ್ನರ್ಪಿಸುವದಕ್ಕಿಂತ ಮಾತು ಕೇಳುವದು ಉತ್ತಮವಾಗಿದೆ. ಟಗರುಗಳ ಕೊಬ್ಬಿಗಿಂತ ವಿಧೇಯತ್ವವು ವಿಶೇಷವಾಗಿದೆ. -1ಸಮುವೇಲ 15:22

ನಮ್ಮ ಪರಲೋಕದ ತಂದೆಯು ಆತನ ವಾಕ್ಯಗಳಿಗೆ ಗಮನಕೊಡುವದನ್ನು ಅಪೇಕ್ಷಿಸುವನೆ ಹೊರತು ಆ ವಾಕ್ಯಗಳನ್ನು ನಾವು ಉತ್ತಮಗೊಳಿಸಲಿಕ್ಕೆ ಪ್ರಯತ್ನಿಸುವದನ್ನಾಗಲಿ ಅಥವಾ ಕಾಲ ಮತ್ತು ಸಂದರ್ಭಗಳಿಗೆ ತಕ್ಕಂತೆ ವಿಧೇಯತೆಯನ್ನು ತೋರಿಸುವದನ್ನಾಗಲಿ ಇಷ್ಟಪಡುವವನಲ್ಲ. ನಾವು ಎಚ್ಚರಿಕೆಯಿಂದ ವಾಕ್ಯವನ್ನು ಕೇಳಿ ಆದಷ್ಟುಮಟ್ಟಿಗೆ ಅವುಗಳನ್ನು ಅನುಸರಿಸುವವರಾಗಿ ದೇವರಲ್ಲಿ ನಂಬಿಕೆಯಿಟ್ಟು ಅದರಿಂದ ಒದಗಿಬರುವ ಪರಿಣಾಮಗಳಿಗೆ ಹೆದರದೆ ಮುಂದೆ ಸಾಗಬೇಕು. ನಮ್ಮನ್ನು ಕಾಯುವ ದೇವರು ತೂಕಡಿಸುವವನಲ್ಲ, ನಿದ್ರಿಸುವವನಲ್ಲ. ಆತನು ಎಲ್ಲಾ ವಿಷಯಗಳಲ್ಲೂ ನಮ್ಮ ವಿಧೇಯತ್ವದಿಂದಾಗಿ ಬಂದೊದಗುವ ಆಗುಹೋಗುಗಳನ್ನು ಗಮನಿಸಿ ಸಮರ್ಥನೀಯವಾಗಿ ನಮ್ಮನ್ನು ಸುಧಾರಿಸುವನು-Z ’ 03, 218 (ಖ 3224).

* * *　　* * *　　* * *

ಮೇ - 14

ಪ್ರೀತಿಯಿಂದ ಸತ್ಯವನ್ನನುಸರಿಸುತ್ತಾ ಬೆಳೆದು ಎಲ್ಲಾ ವಿಷಯಗಳಲ್ಲಿಯೂ ಕ್ರಿಸ್ತನ ಐಕ್ಯವನ್ನು ಹೊಂದುತ್ತಾ ಬರಬೇಕು. ಆತನೇ ಶಿರಸ್ಸು. -ಎಫೆಸ 4:15

ಕೃಪೆಯಲ್ಲಿ ಬೆಳೆಯುವದೆಂದರೆ ಏನು? ಕರ್ತನ ಸಹಕಾರ, ಸಹವಾಸದಲ್ಲಿ ಬೆಳೆಯುವದು. ಆತನ ವ್ಯಕ್ತಿತ್ವಕ್ಕೆ ಸಮೀಪದಲ್ಲಿದ್ದು, ವೈಯಕ್ತಿಕವಾಗಿಯೂ ಮತ್ತು ಆತನ ಸಹವಾಸದಿಂದಲೂ ಆತನಲ್ಲಿ ಐಕ್ಯವಾಗಿದ್ದು, ಬೆಳೆಯುವದಾಗಿದೆ. ಹೀಗೆ ಕರ್ತನ ಕೃಪೆಯಲ್ಲಿ ಬೆಳೆದು ಜ್ಞಾನದಲ್ಲಿ ಬೆಳೆಯದಿರಲು ಸಾಧ್ಯವಿಲ್ಲ. ಕೃಪೆಯ ಅತಿ ಮುಖ್ಯ ಉದ್ದೇಶ ಐಕ್ಯತೆ, ಕ್ರಿಸ್ತನ ಜ್ಞಾನದಲ್ಲಿ ಬೆಳೆದು ಪೂರ್ಣರಾಗುವದು ಮತ್ತು ಆತನ ಸನಿಹ, ಸಹವಾಸದಲ್ಲಿದ್ದು, ದೈವ ಯೋಜನೆಗೆ ತೀರ ಹತ್ತಿರವಾಗಿ ಅದರ ಕಾರ್ಯಾಚರಣೆಯಲ್ಲಿ ಭಾಗಿಗಳಾಗಿದ್ದು, ಕಾರ್ಯನಿರ್ವಹಿಸುವದಾಗಿದೆ. ಆದದರಿಂದ, ನಾವು ಕರ್ತನಿಗೆ ಪ್ರೀತಿಯಿಂದ ವಿಧೇಯರಾಗಿ ಆತನ ಕೃಪೆಯಲ್ಲಿಯೂ ಮತ್ತು ಆತನ ವಾಕ್ಯಗಳನ್ನು ಪ್ರತಿನಿತ್ಯವು ಅಧ್ಯಯನ ಮಾಡುತ್ತಾ, ಧ್ಯಾನಾಸಕ್ತರಾಗಿ ದೈವ ಜ್ಞಾನದಲ್ಲಿ ಅಭಿವೃದ್ಧಿಯಾಗುವೆವು-Z ’03, 200 (ಖ 3215).

* * *　　* * *　　* * *

ಮೇ - 15

ಆಹಾ, ಅಂಜೂರವು ಚಿಗುರದಿದ್ದರೂ ದ್ರಾಕ್ಷಾಲತೆಗಳಲ್ಲಿ ಹಣ್ಣು ಸಿಕ್ಕದಿದ್ದರೂ ಎಣ್ಣೆ ಮರಗಳ ಉತ್ಪತ್ತಿಯು ಶೂನ್ಯವಾದರೂ ಹೊಲಗದ್ದೆಗಳು ಆಹಾರವನ್ನು ಕೊಡದೆ ಹೋದರೂ ಹಿಂಡು

ಹಟ್ಟಿಯೊಳಗಿಂದ ನಾಶವಾದರೂ ಮಂದೆಯು ಕೊಟ್ಟಿಗೆಗಳೊಳಗೆ ಇಲ್ಲದಿದ್ದರೂ ನಾನು ಯೆಹೋವನಲ್ಲಿ ಉಲ್ಲಾಸಿಸುವೆನು, ನನ್ನ ರಕ್ಷಕನಾದ ದೇವರಲ್ಲಿ ಆನಂದಿಸುವೆನು.

ಹಬಕೂಕ್ಕ 3:17,18

ಸ್ವಾಭಾವಿಕವಾಗಿ ಕೆಟ್ಟದ್ದನ್ನು ಮಾಡಿ ಹೊಂದುವ ಬಳುವಳಿಗಾಗಿ ಲೋಕದಲ್ಲಿ ಕಹಿಯಾದ ಅನುಭವಗಳನ್ನು ಹೊಂದಿ ಪಾಠ ಕಲಿಯಲು ದೇವರು ಕೇಡು ಸಂಭವಿಸುವದಕ್ಕೆ ಅವಕಾಶ ಕೊಡುವನು. ಹಾಗೆಯೇ ನಂಬಿಗಸ್ಥ ಸಂತರು ದೇವರು ಜಯಶಾಲಿಗಳಿಗಾಗಿ ಏರ್ಪಡಿಸಿರುವ ಆಶ್ಚರ್ಯಕರವಾದ ಆಶೀರ್ವಾದವನ್ನು ಹೊಂದಲಿಕ್ಕೆ ಅವರು ಶಿಕ್ಷಿತರಾಗಿ ತರಬೇತಿ ಪಡೆದು ಸುಸಂಸ್ಕøತರು, ನಿರ್ಮಲರೂ, ಶುದ್ಧರೂ ಆಗುವದಕ್ಕಾಗಿ ದೇವರು ಅವರ ಜೀವಿತದಲ್ಲಿ ಕೇಡು ಸಂಭವಿಸಲು ಅವಕಾಶ ಕೊಡುವನು.-Z ’03, 94 (ಖ 3167).

* * *                * * *                * * *

ಮೇ - 16

ಜನಾಂಗಗಳು ನನ್ನ ಧರ್ಮವನ್ನು, ಸಕಲ ರಾಜರು ನಿನ್ನ ವೈಭವವನ್ನು ನೋಡುವರು; ಯೆಹೋವನ ಬಾಯಿ ನೇಮಿಸಿದ ಹೊಸ ಹೆಸರು ನಿನಗೆ ದೊರೆಯುವದು. ನೀನು ಯೆಹೋವನ ಕೈಯಲ್ಲಿ ಸುಂದರ ಕಿರೀಟವಾಗಿಯೂ ನಿನ್ನ ದೇವರ ಹಸ್ತದಲ್ಲಿ ರಾಜ ಶಿರೋವೇಷ್ಟನವಾಗಿಯೂ ಇರುವಿ.

-ಯೆಶಾಯ 62:2,3

ಲೋಕದವರಿಂದಲೂ ಮತ್ತು ಹೆಸರಿನ ಕ್ರೈಸ್ತ ಸಮುದಾಯದವರಿಂದಲೂ ನಾವು ಪ್ರತ್ಯೇಕ ವಿಶೇಷ ಜನರಾಗಿದ್ದೇವೆಂಬದನ್ನು ಮರೆಯಬಾರದು. ನಾವು ಉನ್ನತ ನಿರೀಕ್ಷೆ, ಗುರಿ ಮತ್ತು ಆಕಾಂಕ್ಷೆಯುಳ್ಳವರು ಮತ್ತು ದೇವರ ಪ್ರೀತಿ ಕೃಪೆಗೆ ಪಾತ್ರರಾಗಿರುವವರು ಆಗಿದ್ದೇವೆ. ಲೋಕ ಮತ್ತು ಹೆಸರಿನ ಕ್ರೈಸ್ತ ಸಮುದಾಯ ಸಾಮಾನ್ಯವಾಗಿ ಲೌಕಿಕ ಮನೋಭಾವವನ್ನು ಆಶೆ ಆಕಾಂಕ್ಷೆಗಳಿಂದ ಕೂಡಿದವರಾಗಿರುವವರಿಂದ ನಮ್ಮನ್ನು ವಿರೋಧಿಸುತ್ತಾರೆ. ನಮ್ಮ ಬಗ್ಗೆ ಗಮನಕೊಡದೆ ಜೊತೆ ಸೇರದೆ ಇರುವದರ ವಿಷಯವಾಗಿ ನಾವು ಆಶ್ಚರ್ಯಪಡಬೇಕಾಗಿಲ್ಲ-Z ’03, 164 (ಖ 3199).

* * *                * * *                * * *

ಮೇ - 17

ನಿಮಗೆ ಬಹಿಷ್ಕಾರ ಹಾಕುವರು. ಅದಲ್ಲದೆ, ನಿಮ್ಮನ್ನು ಕೊಲ್ಲುವವನು ತಾನು ದೇವರಿಗೆ ಯಜ್ಞವನ್ನು ಮಾಡಿದ್ದೇನೆಂದು ನೆನಸುವ ಕಾಲ ಬರುತ್ತದೆ. -ಯೋಹಾನ 16:2

ಹಿಂದಿನ ಕಾಲಕ್ಕಿಂತ ಈಗಿನ ಹಿಂಸೆಗಳು ಬಹು ನಾಜೂಕಾದವುಗಳು. ಈಗಿನ ನಂಬಿಗಸ್ತರನ್ನು ಕಲ್ಲುಗಳಿಂದ ಹೊಡೆಯುವದಿಲ್ಲ. ಅಥವ ಅವರ ಮೇಲೆ ಬಾಣಗಳನ್ನು ಎಸೆಯುವದಿಲ್ಲ. ಅವರ ತಲೆಯನ್ನು ಹರಿತವಾದ ಆಯುಧದಿಂದ ತೆಗೆಯುವದಿಲ್ಲ. ಆದರೆ, ದುಷ್ಟರು ಕೆಟ್ಟ ಕೆಟ್ಟ ಮಾತುಗಳನ್ನು ಅವರ ಮೇಲೆ ಪ್ರಯೋಗಿಸುವರು ಅನೇಕ ಭಕ್ತರ ವಿರುದ್ಧವಾಗಿ ನಿಷ್ಕಾರಣ ಆರೋಪಗಳನ್ನು ಹೊರಿಸಿ ಅವಮಾನ ಮಾಡುವರು. ಆದರೂ ಭಕ್ತರು ಎಲ್ಲವನ್ನು ಕ್ರಿಸ್ತನಿಗಾಗಿ ಸಹಿಸಿಕೊಂಡು ಆತನ ವಿಷಯವಾಗಿ ಸಾಕ್ಷಿಕೊಡುವರು. ಪ್ರತಿಯೊಬ್ಬ ನಂಬಿಗಸ್ತನು ಪ್ರಥಮ ರಕ್ತಸಾಕ್ಷಿಯಾದ ಸ್ತೆಫನನ್ನು ಅನುಸರಿಸಲಿ. ಅವರು ಸಾಕ್ಷಿಕೊಡುವಾಗ ಸ್ತೆಫನನ ಮುಖದಲ್ಲಿ ಕಾಂತಿ ಹೇಗೆ ಹೊಳೆಯುತ್ತಿತ್ತೋ ಹಾಗೆಯೇ ಹೊಳೆಯಲಿ. ಅವರು ತಮ್ಮ ನಂಬಿಕೆಯ ಕಣ್ಣುಗಳಿಂದ ದೇವರ ಬಲಗಡೆಯಲ್ಲಿ ಆಸೀನನಾಗಿರುವ ನಮ್ಮ ಸಹಾಯಕ ಮತ್ತು ವಿಮೋಚಕನನ್ನು ನೋಡಲಿ. ಅವರ ಮಾತುಗಳೂ ಸ್ತೆಫನನ ಮಾತುಗಳಂತೆ ಮೃದುವಾಗಿರಲಿ ಮತ್ತು ಹೇಗೆ ಸ್ತೆಫನನು ಪವಿತ್ರಾತ್ಮಭರಿತನಾಗಿಯೂ, ಕೃಪೆಯಿಂದಲೂ ತುಂಬಿದವನಾಗಿದ್ದನೋ, ಹಾಗೆಯೇ ಇವರು ಕೂಡ ಇರಲಿ-Z ’97, 57 (ಖ 2108).

* * *   * * *   * * *

ಮೇ - 18

ನಂಬಿರುವ ನಾವಾದರೋ ಆ ವಿಶ್ರಾಂತಿಯಲ್ಲಿ ಸೇರುತ್ತಲೇ ಇದ್ದೇವೆ.

ಇಬ್ರಿಯ 4:3

ನಾವು ಎಷ್ಟರಮಟ್ಟಿಗೆ ಕರ್ತನಲ್ಲಿ ನಂಬಿಕೆ ಇಟ್ಟಿರುತ್ತೇವೆಯೋ ಅಷ್ಟರಮಟ್ಟಿಗೆ ನಮ್ಮ ವಿಶ್ರಾಂತಿ ಸಂಪೂರ್ಣವಾಗಿರುತ್ತೆ. ಯಾರು ಕರ್ತನನ್ನು ಸಂಪೂರ್ಣವಾಗಿ ನಂಬಿರುತ್ತಾರೋ ಅವರು ಸಂಪೂರ್ಣವಾಗಿ ವಿಶ್ರಾಂತಿಯಲ್ಲಿರುವರು. ಆತ್ಮೀಕ ಇಸ್ರಾಯೇಲ್ಯನ ಆದರ್ಶ, ಗುರಿ ಪರಿಪೂರ್ಣ ವಿಶ್ರಾಂತಿಯನ್ನು ಪಡೆಯುವದಾಗಿದೆ. ಈಗಿನ ಅನುಭವದಲ್ಲಿ ಪರಿಪೂರ್ಣ ಸಬ್ಬತ್ತನ್ನು ಆಚರಿಸುವದು, ಈ ವಿಶ್ರಾಂತಿಗಿಂತಲು ಮಿಗಿಲಾದ ಮತ್ತು ವಾಸ್ತವಿಕವಾದ ಪರಿಪೂರ್ಣ, ಪರಿಪಕ್ವವಾದ ವಿಶ್ರಾಂತಿ. ಈ ಒಂದು ವಿಶ್ರಾಂತಿಯನ್ನು ನಮ್ಮದಾಗಿಸಿಕೊಳ್ಳಲು ಈ ಜೀವನದಲ್ಲಿ ನಿರೀಕ್ಷೆಯುಳ್ಳವರಾಗಿ ಪ್ರಯಾಸಪಡುತ್ತೇವೆ. ಇದು ದೇವಜನರಿಗಾಗಿ ಸಿದ್ಧಪಡಿಸಿರುವ ಮಹಾ ವಿಶ್ರಾಂತಿಯಾಗಿದೆ. ಆದದರಿಂದ, ನಾವು ಸಬ್ಬತ್ ಎಂಬ ವಿಶ್ರಾಂತಿಯಲ್ಲಿ ಸೇರುವದಕ್ಕೆ ಪ್ರಯಾಸಪಡೋಣ. ನಮ್ಮಲ್ಲಿ ಒಬ್ಬರಾದರೂ ಅವರ (ಶಾರೀರಕ ಇಸ್ರಾಯೇಲ್ಯರು) ಅವಿಧೇಯತ್ವವನ್ನು ಅನುಸರಿಸುವವರಾಗಬಾರದು. (ಇಬ್ರಿಯ 4:9-11)-Z ’99, 253 (ಖ 2534).

* * *   * * *   * * *

ಮೇ - 19

ದೃಢವಾದ ನಂಬಿಕೆಯುಳ್ಳ ನಾವು ನಮ್ಮ ಸುಖವನ್ನು ನೋಡಿಕೊಳ್ಳದೆ, ದೃಢವಿಲ್ಲದವರ ಅನುಮಾನಗಳನ್ನು ಸಹಿಸಿಕೊಳ್ಳಬೇಕು.- ರೋಮಾಪುರ 15:1

ಮೂಲ ತತ್ವಗಳನ್ನು ಯಾವ ಕಾರಣಕ್ಕೂ ಬಿಟ್ಟುಕೊಡಬಾರದು. ದೇವರು ಮೆಚ್ಚುವ ಹಾಗೆ ನಮಗಿರುವ ಸ್ವಾತಂತ್ರ್ಯ ಮತ್ತು ಹಕ್ಕುಗಳನ್ನು ಆಗಾಗ ಇತರರ ಒಳಿತಿಗಾಗಿ ಗಣನೆಗೆ ತಾರದಿರುವದು ಮೇಲು. ಈ ರೀತಿ ಅಪೋಸ್ತಲನಾದ ಪೌಲನು ಮೂಲ ತತ್ವಗಳನ್ನು ಸಮರ್ಥಿಸಲು ಹಿಂಜರಿಯಲಿಲ್ಲ. (ಗಲಾತ್ಯ 2:5,11) ಕ್ರಿಸ್ತನಿಗಾಗಿಯೂ ಮತ್ತು ಸಭೆಗಾಗಿಯೂ ಅಪೋಸ್ತಲನು ತನಗಿದ್ದಂತ ಸ್ವಾತಂತ್ರ್ಯ ಹಕ್ಕನ್ನು ತ್ಯಾಗ ಮಾಡುವದರಲ್ಲಿ ಕರ್ತನಿಗೆ ಎರಡನೆಯವನಾದನು; ಮತ್ತು ಸಭೆಗೆ ಒಂದು ಗೌರವಾನ್ವಿತ ಮಾದರಿಯಾದನು-Z ’97, 75 (ಖ-2118).

* * *   * * *   * * *

ಮೇ - 20

ಸತ್ಕ್ರಿಯಗಳಲ್ಲಿ ಆಸಕ್ತರಾದ ಸ್ವಕೀಯ ಜನರನ್ನು ತನಗಾಗಿ ಪರಿಶುದ್ಧ ಮಾಡುವದಕ್ಕೂ, ನಮಗೋಸ್ಕರ ತನ್ನನ್ನು ಒಪ್ಪಿಸಿಕೊಟ್ಟನು. -ತೀತ 2:14

ವಿಶೇಷವಾದ ಜನರು “(Peಛಿuಟiಚಿಡಿ Peoಠಿಟe)” ಅಂದರೆ, ವೇಷ-ಭೂಷಣದಲ್ಲಲ್ಲ, ನಡತೆಯಲ್ಲಲ್ಲ, ಆಡುವ ಭಾಷೆಯಲ್ಲಲ್ಲ. ಮೂರ್ಖತನ ಅಥವಾ ವಿವೇಚನೆಯಿಲ್ಲದ ರೀತಿಯಲ್ಲಲ್ಲ, ವೈಲಕ್ಷಣದಲ್ಲಲ್ಲ. ವಿಶೇಷವಾದ ಜನರು ಅಂದರೆ, ಲೋಕ ಮತ್ತು ಲೌಕಿಕತೆಯಿಂದ ಪ್ರತ್ಯೇಕವಾಗಿರುವವರೂ ಆಗಿದ್ದಾರೆ. ಇವರು ಕ್ರಿಸ್ತನ ಆತ್ಮವನ್ನು ಹೊಂದಿದವರು ಕ್ರಿಸ್ತನಿಗಾಗಿ ತಮ್ಮನ್ನು ಪ್ರತಿಷ್ಠೆಪಡಿಸಿಕೊಂಡಿರುವವರು. ಲೋಕ ಮತ್ತು ಸ್ವಾರ್ಥತೆಯನ್ನು ತನ್ನ ಗುರಿಯಾಗಿಟ್ಟಿರುವ ಲೋಕದವರಿಂದ ಬೇರ್ಪಡಿಸಿಕೊಂಡಿರುವವರು. ಕರ್ತನ ವಾಕ್ಯವೇ ತಮ್ಮ ಧರ್ಮವೆಂದು ತಿಳಿದು ಅದನ್ನು ಪರಿಪಾಲಿಸುವವರು. ದೈವಜ್ಞಾನಕ್ಕೆ ಲೋಕದ ಜ್ಞಾನ ಸ್ಪಂದಿಸದಿರುವಾಗ ಲೋಕದ ಜ್ಞಾನವನ್ನು ನಿರಾಕರಿಸುವವರು ಲೋಕದಲ್ಲಿದ್ದರೂ ಲೋಕದವರಲ್ಲ. ಇವರು ವಿಶೇಷ ನಂಬಿಕೆಯಲ್ಲಿ ಬೇರೂರಿ ನೆಲೆಗೊಂಡಿರುವವರು ಮತ್ತು ಆ ನಂಬಿಕೆಗೆ ಬದ್ಧರಾಗಿ ಉತ್ಸಾಹಭರಿತರಾಗಿ ನಡೆಯುವವರು. ತಮ್ಮನ್ನೆ ತಮ್ಮ ಅರಸನಾದ ಕ್ರಿಸ್ತನಿಗೆ ತ್ಯಾಗ ಮಾಡಿರುವವರು ಮತ್ತು ಆತನ ಚಿತ್ತ ಬಿಟ್ಟು ಬೇರೇನನ್ನು ತಿಳಿಯದವರು. ಇವರು ಸತ್ಯವನ್ನು ಪರಿಷ್ಕಾರವಾಗಿ ತಿಳಿದು ಆಳವಾಗಿ ಅಧ್ಯಯನಮಾಡಿ ಕರ್ತನಿಗೆ ಬದ್ಧರಾಗಿ ಕೇಳುವವರಿಗೆ ಸಕಾರಣವಾಗಿ ಒಪ್ಪುವಂತ ಉತ್ತರಕೊಡುವವರಾಗಿದ್ದಾರೆ. ಆಶ್ಚರ್ಯ ಮತ್ತು ಅಪನಂಬಿಕೆಯಿಂದ ಕಲ್ಪಿಸಿ ಉತ್ತರ ಕೊಡುವ ಇತರರಂತೆ ಇವರಿಲ್ಲ-Z ’97, 95 (ಖ 2127).

***   ***   ***

ಮೇ - 21

ದೈವ ಪ್ರೇರಿತವಾದ ಪ್ರತಿಯೊಂದು ಶಾಸ್ತ್ರವು ಉಪದೇಶಕ್ಕೂ ಖಂಡನೆಗೂ ತಿದ್ದುಪಾಟಿಗೂ, ನೀತಿ ಶಿಕ್ಷೆಗೂ ಉಪಯುಕ್ತವಾಗಿದೆ. ಅದರಿಂದ ದೇವರ ಮನುಷ್ಯನು ಪ್ರವೀಣನಾಗಿ ಸಕಲ ಸತ್ಕಾರ್ಯಕ್ಕೆ ಸನ್ನದ್ಧನಾಗುವನು. -2ತಿಮೋಥಿ 3:16,17

ನಾವೆಲ್ಲರೂ ನೆನಪಿಸಿಕೊಳ್ಳುವ ಒಳ್ಳೆಯ ವಿಷಯವೇನಂದರೆ, ದೇವರಾತ್ಮನ ಸಕಲ ಗುಣಗಳು ಮತ್ತು ನಾವು ಈಗಾಗಲೇ ದೇವರ ವಿಷಯದ ಜ್ಞಾನದಲ್ಲಿ ಸಿದ್ಧಿಗೆ ಬಂದಿರುವದರಿಂದ, ನಾವು ದೇವರ ಬಳಿಗೂ ಮತ್ತು ಪರಿಶುದ್ಧರಾಗಲು ನಮಗೆ ಹಳೇ ಒಡಂಬಡಿಕೆಯ ದೈವೋಕ್ತಿಗಳಿಂದಲೂ ಮತ್ತು ಕರ್ತನ ವಾಕ್ಯಗಳಿಂದಲೂ ಆತನಿಂದ ಪ್ರೇರಿತರಾದ ಅಪೋಸ್ತಲರಿಂದಲೂ ಸಹಾಯ ಒದಗಿಬಂದಿರುವುದರಿಂದ, ಸತ್ಯಜ್ಞಾನ ಅದರಲ್ಲಿ ಅಡಕವಾಗಿರುವ ವಾಗ್ದಾನ ಸಹಿತವಾದ ರಕ್ಷಣೆಯನ್ನು ಪಡೆಯಲು ಬೇರೆ ಯಾರ ಬಳಿಗೂ ಹೋಗುವ ಅವಶ್ಯಕತೆಯಿಲ್ಲ-Z ’97, 170 (ಖ 2165).

* * *     * * *     * * *

ಮೇ - 22

ದೇವರು ನಮಗೆ ಕೊಟ್ಟಿರುವ ಆತ್ಮವು ಬಲ, ಪ್ರೀತಿ, ಶಿಕ್ಷಣಗಳ ಆತ್ಮವೇ ಹೊರತು, ಹೇಡಿತನದ ಆತ್ಮವಲ್ಲ. -2 ತಿಮೋಥಿ 1:7

ದೇವರು ತನ್ನ ಜನರಿಗೆ ಕೊಟ್ಟಿರುವ ಆತ್ಮ ಭಯದ ಆತ್ಮವಲ್ಲ. ಆದರೆ, ಅದು ಪ್ರೀತಿಯಿಂದ ತುಂಬಿರುವ ಶಕ್ತಿ, ಚೈತನ್ಯ ಮತ್ತು ಉತ್ಸಾಹ. ದೇವರಲ್ಲಿ ನಮಗಿರುವ ಪ್ರೀತಿ ಮತ್ತು ಆತನ ಮೆಚ್ಚುಗೆ ಪಡೆಯುವಂಥ ಸೇವೆ, ಸತ್ಯದ ಪರವಾಗಿರುವ ಪ್ರೀತಿ, ದೇವ ಜನರ ಪರವಾಗಿ ನಾವು ತೋರಿಸುವ ಪ್ರೀತಿ, ದೇವ ಜನರನ್ನು ಪವಿತ್ರತೆ ತಲುಪಲು ಅವರನ್ನು ಹುರಿದುಂಬಿಸಿ ಪ್ರೋತ್ಸಾಹಿಸುವದಾಗಿದೆ ಮತ್ತು ಸಮಯವಿರಲಾಗಿ ಎಲ್ಲರಿಗೂ ಒಳ್ಳೇದನ್ನು ಮಾಡುವ ಪ್ರೀತಿ, ಸ್ವಸ್ಥ ಮನಸ್ಸು ಅಂದರೆ, ದೇವರ ವಾಕ್ಯದ ಆಧಾರದ ಮೇಲೆ ಮನಸ್ಸನ್ನು ಸ್ಥಿರಗೊಳಿಸಿ ಶಕ್ತಿಯುತ ಮಾಡಿ ಪ್ರತಿಯೊಂದು ವಿಷಯವನ್ನು ಆಳವಾಗಿ ಅಭ್ಯಾಸ ಮಾಡಿ ಯಾರಿಗೂ ಹೆದರದೆ ಧೈರ್ಯವಾಗಿ, ಸಮಯ ಸಂದರ್ಭಗಳನ್ನು ಬುದ್ಧಿವಂತಿಕೆಯಿಂದ ನಿಷ್ಕರ್ಷೆ ಮಾಡಿ ನಮಗಿರುವ ಸಾಮರ್ಥ್ಯವನ್ನು ನಮ್ಮಲ್ಲಿರುವ ಶಕ್ತಿ, ಜ್ಞಾನಕ್ಕನುಸಾರವಾಗಿ ಉಪಯೋಗಿಸುವಾಗ ನಮ್ಮ ಪ್ರೀತಿಯು ಪ್ರತಿಷ್ಠೆಪಡಿಸಿಕೊಂಡಿರುವ ನಮ್ಮ ಹೃದಯದಲ್ಲಿ ಜ್ವಾಲೆಯಂತೆ ಉರಿಯುವುದು-Z ’97, 170 (ಖ 2165).

* * *     * * *     * * *

ಮೇ - 23

ನೀವು ಸಹ ಒಬ್ಬರ ಕಾಲನ್ನು ಒಬ್ಬರು ತೊಳೆಯುವ ಹಂಗಿನವರಾಗಿದ್ದೀರಿ. ಯೋಹಾನ 13:14

ಈ ವಚನ ಸೂಚಿಸುವದೇನಂದರೆ, ಕ್ರಿಸ್ತನ ಶಿಷ್ಯರು ಒಬ್ಬರಿಗೊಬ್ಬರು ಎಚ್ಚರಿಕೆಯಿಂದ ಸಹಕರಿಸಿ ಅವರವರ ಅಭ್ಯುದಯಕ್ಕೆ ಹೆಚ್ಚಿನ ಗಮನಹರಿಸಿ ಪ್ರತಿಯೊಬ್ಬನೂ ತನ್ನನ್ನು ಶುಭ್ರಮಾಡಿಕೊಂಡು ಶುದ್ದ ಹಾಗೂ ನಿರ್ಮಲ ಚಿತ್ತ ಉಳ್ಳವರಾಗಿರಲು ಪ್ರಯಾಸಪಡಬೇಕು. ಹೀಗೆ ಕೆಟ್ಟದಾಗಿರುವ ಈಗಿನ ಪ್ರಪಂಚದಿಂದ ಬರುವಂತ ಪರೀಕ್ಷೆಗಳು, ಶೋಧನೆಗಳು ಅಡ್ಡಿ ಆತಂಕಗಳನ್ನು ಎದುರಿಸಿ ಅವುಗಳ ವಿರುದ್ದ ಹೋರಾಟ ಮಾಡಿ ಜಯಿಸಬೇಕಾಗಿದೆ. ಈ ಅಡಚಣೆ, ಶೋಧನೆಗಳು, ಪರೀಕ್ಷೆಗಳು ಮೂರು ಮೂಲ ವಿಷಯಗಳಾದ ಲೋಕ, ಶರೀರ, ಸೈತಾನನಿಂದ ಉತ್ಪತ್ತಿಯಾಗುವದು. ನಾವು ಆತ್ಮನ ನಾನಾ ಗುಣಗಳಾದ ತಗ್ಗಿದ ಸ್ವಭಾವ, ತಾಳ್ಮೆ, ಗಾಂಭೀರ್ಯ, ಸಹೋದರರ ಬಗ್ಗೆ ಕರುಣೆಯಿಂದ ಕೂಡಿರುವ ಪ್ರೀತಿ ಇವುಗಳನ್ನು ಅಭ್ಯಾಸ ಮಾಡಿ ಮೈಗೂಡಿಸಿಕೊಂಡಾಗ ನಾವು ಇತರರಿಗೂ ಸಹಾಯ ಹಸ್ತ ನೀಡಿ ಅವರೂ ಕೂಡ ಈ ಗುಣಗಳನ್ನು ಪಡೆಯಲಿಕ್ಕೆ ಸಾಧ್ಯವಾಗುವದು. ಹೀಗೆ ನಡೆಯುವದರಿಂದ ನಾವು ಲೋಕದ ಹಾಗೂ ಶಾರೀರಿಕ ಮಲಿನತ್ವಗಳಿಂದ ದೂರವಾಗಿ ಶುದ್ದರಾಗುವೆವು-Z '97, 243 (ಖ 2200).

* * *   * * *   * * *

ಮೇ - 24

ಪ್ರೀತಿಯು .............................. ಸಿಟ್ಟುಗೊಳ್ಳುವುದಿಲ್ಲ.- 1ಕೊರಿಂಥ 13:4,5

ಸ್ವಾಭಾವಿಕವಾಗಿ ನಾವು ಬಿದ್ದುಹೋಗಿರುವದರಿಂದ ಮತ್ತು ಅನುವಂಶಿಕತೆಯ ಪರಿಣಾಮವಾಗಿ ನಮ್ಮ ನರಗಳ ದೌರ್ಬಲ್ಯದಿಂದ, ಸಿಡಿಮಿಡಿಗೊಳ್ಳುವದು, ಬಾಯಿಬಿಟ್ಟು ಹೇಳದೆ ಇರುವುದು, ಮುಂಗೋಪ, ಇವೆಲ್ಲವೂ ನಮ್ಮ ಶರೀರದಲ್ಲೇ ಉತ್ಪತ್ತಿಯಾಗಿ ನೆಲೆಗೊಂಡಿರುವದರಿಂದ, ಕರ್ತನ ಆತ್ಮವನ್ನು ಹೊಂದಿರುವ ನಾವು ಈ ಕೆಟ್ಟ ಪ್ರವೃತ್ತಿಯ ವಿರುದ್ದ ಹೋರಾಟ ನಡಿಸಿ, ಅವುಗಳನ್ನು ಅಡಗಿಸಬೇಕು. ಮತ್ತೊಂದು ರೀತಿಯಲ್ಲಿ ಸಾಮಾನ್ಯವಾಗಿ ನಮ್ಮದು ಇದೇ ದಾರಿ ಎಂದು ಹೇಳುವುದುಂಟು, ಆದರೆ, ಬಿದ್ದುಹೋಗಿರುವ ನಮ್ಮಲ್ಲಿ ಕೆಟ್ಟದ್ದೇ ವಾಸವಾಗಿರುವುದರಿಂದ, ನೂತನ ಸೃಷ್ಟಿಗಳಾಗಿರುವವರು ಈ ಹಳೆಯ ಶಾರೀರಿಕ ಸ್ವಭಾವವನ್ನು ಮತ್ತು ಸಂಬಂಧಿಸಿದ ಇತರೆ ಗುಣಗಳನ್ನು ಹಾಗೂ ಸೈತಾನನ ವಿರುದ್ದವೂ ಹೋರಾಟ ಮಾಡಿ ಜಯಗಳಿಸುತ್ತಾರೆ. ಕೆಲವರು ಮಾತ್ರ ತಮ್ಮ ಸ್ನೇಹಿತರ ಮತ್ತು ಕುಟುಂಬ ವರ್ಗದವರ ಜೊತೆ ಪ್ರೀತಿಯಿಂದ ವರ್ತಿಸುತ್ತಾರೆ. ಈ ಗುಣವನ್ನು ದೇವರ ಮಕ್ಕಳಾಗಿರುವವರು ದಿನೇ ದಿನೇ ಅಭಿವೃದ್ದಿಪಡಿಸಿಕೊಂಡು ಸಾಧು ಸ್ವಭಾವದವರಾಗಬೇಕು-Z '97, 247 (ಖ 2202).

* * *   * * *   * * *

ಮೇ - 25

ಕೆಟ್ಟತನಕ್ಕೆ ಸೋತು ಹೋಗದೆ ಒಳ್ಳೇತನದಿಂದ ಕೆಟ್ಟತನವನ್ನು ಸೋಲಿಸು.

-ರೋಮಾಪುರ 12:21

ನಾವು ಕೆಟ್ಟ ಮಾತುಗಳಿಂದಾಗಲಿ, ಕೆಟ್ಟ ವಿಧಾನದಿಂದಾಗಲಿ ಅಥವ ಕೆಟ್ಟ ರೀತಿಯಲ್ಲಾಗಲಿ ನಡೆದುಕೊಳ್ಳಬಾರದು ಮತ್ತು ಅನುಸರಿಸಲೂಬಾರದು. ಹಾಗೆ ಒಂದು ವೇಳೆ ಮಾಡುವದಾದರೆ, ತಾತ್ಕಾಲಿಕವಾಗಿ ನಮ್ಮ ವಿರೋಧಿಯನ್ನನುಸರಿಸಿದಂತಾಗುವುದು ಮತ್ತು ವಿರೋಧಿಯು ಉಪಯೋಗಿಸುವ ಮಾರ್ಗ ರೀತಿ ಕರ್ತನ ಮಾರ್ಗಕ್ಕಿಂತ ಒಳ್ಳೇದೆಂದು ಒಪ್ಪಿದ ಹಾಗಾಗುವದು. ಕೋಪಕ್ಕೆ ಪ್ರತಿಯಾಗಿ ಕೋಪ, ಕೆಟ್ಟ ಮಾತುಗಳಿಗೆ ಪ್ರತಿಯಾಗಿ ಕೆಟ್ಟ ಮಾತು, ಕಠಿಣವಾಗಿ ವರ್ತಿಸಿದರೆ, ಕಠಿಣವಾಗಿ ವರ್ತಿಸುವದು ದೋಷಾರೋಪಣೆಗೆ ದೋಷಾರೋಪಣೆ ಮಾಡುವದು. ಹಿಂಸೆಗೆ ಹಿಂಸೆ, ಹೊಡೆತಕ್ಕೆ ಹೊಡೆತ ಅಥವ ಬೇರೆ ಯಾವ ರೀತಿಯಲ್ಲಾದರು ನಡಕೊಂಡ ಪಕ್ಷಕ್ಕೆ ಕೆಟ್ಟತನವನ್ನು ಕೆಟ್ಟದರಿಂದಲೇ ಸೋಲಿಸಿದಂತಾಗುವುದು. ಇದು ಬಿದ್ದು ಹೋಗಿರುವ ಮಾನವರಾದ ನಮ್ಮ ಸ್ವಾಭಾವಿಕ ಗುಣ. ಇದನ್ನು ನಿವಾರಣೆ ಮಾಡಬೇಕೆಂಬುದೆ ಕರ್ತನ ಉದ್ದೇಶ ಮತ್ತು ನೂತನ ಸ್ವಭಾವವನ್ನು ಅಭ್ಯಾಸ ಮಾಡಲು ಸಾಧ್ಯತೆ. ವಿರೋಧಿಯ ದಾರಿತಪ್ಪಿಸುವಿಕೆಗೆ ಒಳಗಾಗಿ ಅವನ ಮಾರ್ಗವನ್ನನುಸರಿಸಿದರೆ ಕೆಟ್ಟದರಿಂದಲೇ ಸೋಲಿಸಿದಂತಾಗುವದು-Z ’97, 267 (ಖ 2212).

* * *          * * *          * * *

ಮೇ - 26

ಜ್ಞಾನವು ಉಬ್ಬಿಸುತ್ತದೆ. ಪ್ರೀತಿಯು ಭಕ್ತಿ ವೃದ್ಧಿಯನ್ನುಂಟುಮಾಡುತ್ತದೆ.

1ಕೊರಿಂಥ 8:1

ದೈವ ಯೋಜನೆಯನ್ನು ಇತರರಿಗೆ ಬೋಧಿಸುವವನು ವಿಶೇಷವಾದ ಶೋಧನೆಗಳಿಗೆ ಗುರಿಯಾಗುವನು. ಕರ್ತನ, ಕರ್ತನ ಜನರ ಗೌರವಾನ್ವಿತ ಸೇವೆ ಮಾಡುವಾಗ ಅದಕ್ಕೆ ಸರಿಸಮಾನವಾಗಿ ಅತಿ ಹೆಚ್ಚಿನ ಪವಿತ್ರಾತ್ಮ ಗುಣಗಳನ್ನು ಮತ್ತು ಜ್ಞಾನವನ್ನು ಕೋರುವರು. ಯಾವನಾದರು ಇತರರಿಗೆ ತಿಳುವಳಿಕೆಯನ್ನು ಬೋಧಿಸುವ ಉಪದೇಶಕ ಮತ್ತು ಕರ್ತನ ಪ್ರತಿನಿಧಿಯಾಗಬೇಕಾದರೆ, ಅವನು ಪವಿತ್ರಾತ್ಮನ ಎಲ್ಲಾ ಗುಣಗಳನ್ನು ಮತ್ತು ಇದರ ಜೊತೆಗೆ ತಗ್ಗಿದ ಸ್ವಭಾವವನ್ನು ಅಭ್ಯಾಸ ಮಾಡಬೇಕು. ಇವುಗಳ ಜೊತೆಗೆ ಪ್ರೀತಿಯನ್ನೊಳಗೊಂಡ ಜ್ಞಾನವಿರುವ ಪಕ್ಷಕ್ಕೆ ತನ್ನನ್ನು ತಾನು ವೃದ್ಧಿಗೊಳಿಸಿಕೊಳ್ಳುವದಲ್ಲದೆ, ಇತರರನ್ನು ಅಭಿವೃದ್ಧಿಗೊಳಿಸುವ ಸೇವೆಯನ್ನು ಮಾಡಲು ಶಕ್ತನಾಗುವನು-Z ’97, 277 (ಖ 2218).

* * *                * * *                * * *

ಮೇ - 27

ಪಕ್ಷಪಾತದಿಂದಾಗಲಿ ಒಣ ಹೆಮ್ಮೆಯಿಂದಾಗಲಿ ಯಾವದನ್ನು ಮಾಡದೆ ಪ್ರತಿಯೊಬ್ಬನು ದೀನ ಭಾವದಿಂದ ಮತ್ತೊಬ್ಬರನ್ನು ತನಗಿಂತಲೂ ಶ್ರೇಷ್ಠರೆಂದು ಎಣಿಸಲಿ. -ಫಿಲಿಪ್ಪಿ 2:3

ಅಪೋಸ್ತಲನಾದ ಪೌಲನು ಪ್ರಭೋದಿಸುವದೇನಂದರೆ, ಪ್ರತಿಯೊಬ್ಬನು ದೀನ ಭಾವವನ್ನು ಅಭ್ಯಾಸಿಸಬೇಕು ಮತ್ತು ಪ್ರತಿಯೊಂದು ಕಾರ್ಯವನ್ನು ಒತ್ತಾಯಪೂರ್ವಕ-ವಾಗಿಯಾಗಲಿ ಅಥವ ಒಣ ಹೆಮ್ಮೆಯಿಂದಾಗಲಿ ಮಾಡಬಾರದು. ತನ್ನನ್ನು ಹೊಗಳಿಕೊಳ್ಳುವದಾಗಲೀ, ತಾನೇ ಎಲ್ಲರಿಗಿಂತ ಮಿಗಿಲಾದವನು ಎಂಬುದಾಗಿ ಹೇಳಿಕೊಳ್ಳುವದಾಗಲೀ ಮಾಡಬಾರದು. ಈ ಸ್ವಭಾವ ಅಥವ ನಡತೆ ಕರ್ತನ ಆತ್ಮಕ್ಕೂ ಹಾಗೂ ಸಭೆಯ ಆಶೀರ್ವಾದಕ್ಕೂ ಮುಳುವಾಗಿ ಕಂಡುಬರುವದು. ಇದಕ್ಕೆ ಬದಲು ಪ್ರತಿಯೊಬ್ಬನು ದೀನ ಭಾವದಿಂದ ತನ್ನ ಸಹೋದರರಲ್ಲಿರುವ ಒಳ್ಳೆ ಗುಣಗಳನ್ನು ನೋಡಿ ಅದರ ಬಗ್ಗೆ ಮೆಚ್ಚುಗೆ ವ್ಯಕ್ತಪಡಿಸಿ ಕಡೇ ಪಕ್ಷ ಅದರಲ್ಲಿನ ಕೆಲವು ಗುಣಗಳು ತನಗಿಂತಲೂ ಶ್ರೇಷ್ಠವಾಗಿವೆ ಎಂದು ಪರಿಗಣಿಸಬೇಕು. ಯಾವ ಸಭೆಯಲ್ಲಿಯಾದರೂ ಎಲ್ಲಾ ಸಾಮಥ್ರ್ಯ, ಎಲ್ಲಾ ಪ್ರತಿಭೆಗಳು ಒಬ್ಬನಲ್ಲಿವೆ ಎಂದು ನಿರೀಕ್ಷಿಸಬಾರದು. ಹೀಗಿರುವಾಗ ಪ್ರತಿಯೊಬ್ಬನು ದೀನ ಭಾವವುಳ್ಳವನಾಗಿ ಇತರರಲ್ಲಿಯೂ ತನಗಿಂತ ಹೆಚ್ಚಿನ ಒಳ್ಳೇ ಗುಣಗಳಿವೆ ಎಂಬುದಾಗಿ ಮನಗಂಡು ಅಂಥವರನ್ನು ತನಗಿಂತಲೂ ಶ್ರೇಷ್ಠ ಎಂಬುದಾಗಿ ತಿಳಿಯಬೇಕು-Z ’97, 296 (ಖ 2227).

* * *                * * *                * * *

ಮೇ - 28

ಹೀಗಿರುವುದರಿಂದ ನಾವು ಯಾವಾಗಲೂ ಧೈರ್ಯಗೆಡದೆ ಧೈರ್ಯವುಳ್ಳವರಾಗಿದ್ದೇವೆ........ ದೇಹದಲ್ಲಿ ವಾಸಿಸುವವರೆಗೂ (ಈಗಿರುವ ನಮ್ಮ ಮತ್ತು ನಮ್ಮ ಸುತ್ತಲು ಇರುವ ಸ್ಥಿತಿಯನ್ನು ಎಲ್ಲಿಯವರೆಗೆ ತೃಪ್ತಿದಾಯಕವಾಗಿದೆ ಎಂದು ಭಾವಿಸುತ್ತೇವೆಯೋ) ಕರ್ತನಿಗೆ ದೂರದಲ್ಲಿರುವ ಪ್ರವಾಸಿಗಳಾಗಿದ್ದೇವೆಂಬುದನ್ನು ಬಲ್ಲೆವು.

-2 ಕೊರಿಂಥ 5:6,7

ನಾವು ಕರ್ತನ ಸಹವಾಸದಲ್ಲಿ ಜೀವಿಸುತ್ತಾ, ಆತನೊಂದಿಗೆ ನಡೆಯುವವರಾಗಿರುವ ಪಕ್ಷಕ್ಕೆ ಈಗ ನಾವು ಪಡೆದಿರುವ ಸ್ಥಾನ ಸ್ಥಿತಿಗತಿಗಳು ಪರಿಪೂರ್ಣವಾಗಿವೆ. ಸಂತೃಪ್ತಿಕರವಾಗಿವೆ ಎಂದು ಭಾವಿಸಲು ಸಾಧ್ಯವಿಲ್ಲ. ಈ ಲೋಕದಲ್ಲಿ ನಾವು ಅನ್ಯರೂ ಪ್ರವಾಸಿಗರಂತಿದ್ದು ಉತ್ತಮವಾದ ವಿಶ್ರಾಂತಿ ಮತ್ತು ಮನೆಯನ್ನು ಅಂದರೆ, ದೇವರು ತನ್ನನ್ನು ಪ್ರೀತಿಸಿದವರಿಗಾಗಿ ಏರ್ಪಡಿಸಿರುವ ಉತ್ತಮವಾದ ದೇಶವನ್ನು ಎದುರು ನೋಡುವವರಾಗಿ ನಡೆಯುತ್ತೇವೆ. ಅಪೋಸ್ತಲನು 7ನೇ ವಚನದಲ್ಲಿ ಹೇಳಿರುವ ವಿಷಯ, ನೋಡಿ ನಂಬುವವರಾಗಿ ನಡೆಯದೆ, ನೋಡದೆ ನಂಬುವವರಾಗಿ ನಡೆಯುವವರಿಗೆ ಅನ್ವಯಿಸುತ್ತದೆ. ನಾವು

ದೇವರಲ್ಲಿ ಪೂರ್ಣ ನಂಬಿಗಸ್ತರಾಗಿ (ದೇವರಲ್ಲಿ ಸಂಪೂರ್ಣ ನಂಬಿಕೆಯಿಟ್ಟಿರುವ ನಾವು ನಂಬಿಕೆಯಿಂದ ನಡೆಯಲು ಸಂತೋಷಿಸುತ್ತೇವೆ.) ನಾವು ಕರ್ತನು ಏರ್ಪಡಿಸಿರುವ ಮನೆಯಿಂದ ದೂರವಿದ್ದರೂ (ಈಗ ಈ ಲೋಕದಲ್ಲಿ ನಾವು ಪ್ರವಾಸಿಗಳಾಗಿಯೂ ಅನ್ಯರಂತೆಯು ಇದ್ದೇವೆ.) ಕರ್ತನ ಮನೆಯಲ್ಲಿದ್ದಂತೆ ನಮ್ಮ ಆತ್ಮದಲ್ಲಿ ಭಾವಿಸಿಕೊಳ್ಳುತ್ತೇವೆ-Z '97, 305 (ಖ 2230).

* * *                * * *                * * *

ಮೇ - 29

ಶಾಂತಿಯನ್ನು ನಿಮಗೆ ಬಿಟ್ಟುಹೋಗುತ್ತೇನೆ. ನನ್ನಲ್ಲಿರುವ ಶಾಂತಿಯನ್ನು ನಿಮಗೆ ಕೊಡುತ್ತೇನೆ......... ನಿಮ್ಮ ಹೃದಯವು ಕಳವಳಗೊಳ್ಳದಿರಲಿ, ಹೆದರದಿರಲಿ.

ಯೋಹಾನ 14:27

ನಾವು ಎಷ್ಟು ಹೆಚ್ಚಿಗೆ ಲೋಕ, ಶಾರೀರ ಮತ್ತು ಸೈತಾನನ್ನು ಜಯಗಳಿಸುತ್ತೇವೆಯೋ ಅಷ್ಟೇ ಹೆಚ್ಚಾಗಿ ಪರಲೋಕದಲ್ಲಿರುವ ನಮ್ಮ ತಂದೆಯ ಚಿತ್ತವನ್ನು ನೆರವೇರಿಸುತ್ತೇವೆ. ನಾವು ಎಷ್ಟು ಹೆಚ್ಚಾಗಿ ಕರ್ತನ ಸಹವಾಸ ಮತ್ತು ಅನ್ಯೋನ್ಯತೆಯನ್ನು ಪಡೆಯುತ್ತೇವೆಯೋ ಅಷ್ಟೇ ಹೆಚ್ಚಾಗಿ ಆತನಿಗೆ ಮೆಚ್ಚುವ ಕಾರ್ಯವನ್ನು ನಾವು ಮಾಡುವವರಾಗುವೆವು. ಮತ್ತು ಅಷ್ಟೇ ಹೆಚ್ಚಾಗಿ ಶಾಂತಿ ಮತ್ತು ಸಮಾಧಾನವನ್ನು ಹೊಂದುತ್ತೇವೆ. ಇದನ್ನು ನಮ್ಮಿಂದ ಯಾರು ಕಸಕೊಳ್ಳಲಾರರು. ನಮಗೆ ಬರುವ ಕಷ್ಟಗಳು, ಪರೀಕ್ಷೆಗಳು, ಹಿಂಸೆಗಳು ಇದನ್ನು ಅಂದರೆ, ನಾವು ಪಡೆದಿರುವ ಶಾಂತಿ, ಸಮಾಧಾನವು ಶ್ರೇಷ್ಠವಾಗಿಯು ಮಧುರವಾಗಿಯೂ ಇರುವಂತೆ ಮಾಡುವದು. "ಹಾಗೆಯೇ ನಿಮಗೂ ಈಗ ದುಃಖವಿದ್ದರೂ ನಾನು ನಿಮ್ಮನ್ನು ತಿರುಗಿ ನೋಡುವೆನು. ಆಗ ನಿಮ್ಮ ಹೃದಯಕ್ಕೆ ಆನಂದವಾಗುವದು ಮತ್ತು ನಿಮ್ಮ ಆನಂದವನ್ನು ಯಾರು ನಿಮ್ಮಿಂದ ತೆಗೆಯುವುದಿಲ್ಲ. (ಯೋಹಾನ 16:22)-Z '97, 306 (ಖ 2230).

* * *                * * *                * * *

ಮೇ - 30

ಕ್ರೈಸ್ತರು ನಿರೀಕ್ಷಿಸುವ ಮಹಾಪದವಿಯನ್ನು ನೆನಸಿ ಉಲ್ಲಾಸವಾಗಿರ್ರಿ. ಉಪದ್ರವದಲ್ಲಿ ಸೈರಣೆಯುಳ್ಳವರಾಗಿರ್ರಿ.                -ರೋಮಾಪುರ 12:12

ಕ್ರೈಸ್ತರು ಹೋರಾಡುವ ಈ ಮಹಾಯುದ್ಧದಲ್ಲಿ ಇದು ಒಂದು ಮುಖ್ಯವಾದ ಭಾಗ. ಅವನು ಹಳೇ ಸ್ವಭಾವದ ವಿರುದ್ಧ ಸತತ ಹೋರಾಟ ಮಾಡಬೇಕು. ಮಹಾ ರಕ್ಷಣಾ ನಾಯಕನ ಶಕ್ತಿಯನ್ನು ಆಧಾರ ಮಾಡಿಕೊಂಡು ಮಹಾ ಜಯವನ್ನು ಎದುರು ನೋಡುವಂಥಾಗಬೇಕು. ಅವನು ಹೊಗಳಿಕೆಗೂ ವೃದ್ಧಿಯ ವಂಚನೆಗೂ ಒಳಗಾಗಿ ಪ್ರತಿಕೂಲ ಸ್ಥಿತಿಯ ತೊಂದರೆಯಿಂದ ವಿಚಲಿತನಾಗಿ ಸೋತುಹೋಗಬಾರದು. ಜೀವನದಲ್ಲಿ ಎದುರು ಬರುವಂತ ಪರೀಕ್ಷೆಗಳಿಂದ ತನ್ನ ಸ್ವಭಾವವನ್ನು ಕಠಿಣಗೊಳಿಸಿ ಚಿಂತಾಕ್ರಾಂತನಾಗಿ

ಅಥವ ಸಿಡುಕು ಅಥವ ನಿಷ್ಠೂರ ಮತ್ತು ಕರುಣೆ ಇಲ್ಲದವನಾಗುವದಕ್ಕೆ ಅವಕಾಶ ಕೊಡಬಾರದು. ಕರ್ತನು ಇವನ ನಂಬಿಗಸ್ಥ ಮನೆವಾರ್ತೆತನವನ್ನು ಪರೀಕ್ಷಿಸುವದಕ್ಕೆ ಲೌಕಿಕವಾಗಿ ಐಶ್ವರ್ಯವನ್ನು ಅನುಗ್ರಹಿಸಿದರೆ, ಹೆಮ್ಮೆಪಡುವದಾಗಲಿ ಅಥವ ತನ್ನ ಸ್ವನೀತಿಯಿಂದ ವೃದ್ಧಿಯಾದನೆಂದಾಗಲಿ ಭಾವಿಸದೆ ಇವೆಲ್ಲವು ಕರ್ತನು ತನ್ನ ನಂಬಿಕೆಯನ್ನು ಪರೀಕ್ಷಿಸುವದಕ್ಕೆ ಮಾಡಿದ್ದಾನೆಂದು ಮನಗಾಣಬೇಕು-Z ’95, 20 (ಖ 1759).

* * *　　　* * *　　　* * *

ಮೇ - 31

ಮಾಂಸ ತಿನ್ನುವದನ್ನಾಗಲಿ, ದ್ರಾಕ್ಷಾರಸ ಕುಡಿಯುವದನ್ನಾಗಲಿ ನನ್ನ ಸಹೋದರನಿಗೆ ಅಡ್ಡಿಯನ್ನುಂಟುಮಾಡುವ ಬೇರೆ ಯಾವದನ್ನಾಗಲಿ ಬಿಟ್ಟುಬಿಡುವದು ಒಳ್ಳೇದು.

ರೋಮಾ 14:21

ಇದು ಪ್ರೀತಿಯೆಂಬ ಕಟ್ಟಳೆಗೆ ವಿರೋಧವಾದ ಒಂದು ಮಹಾ ಅಪರಾಧ. ಹಾಗೆಯೇ, ಸಹೋದರರನ್ನು ಬೀಳಿಸುವದು ಕರ್ತನು ಮತ್ತಾಯ 18:6ರಲ್ಲಿ ಕೊಟ್ಟಿರುವ ಆಜ್ಞೆಗೆ ವಿರೋಧವಾದದ್ದು. ಇದಲ್ಲದೆ, ನಂಬಿಗಸ್ತ ಮನೆವಾರ್ತೆಯವರಾಗಲಿಕ್ಕೆ ಬರುವ ಇತರರನ್ನು ಅಡ್ಡಿಪಡಿಸುವದು ಒಂದು ಮಹಾ ಅಪರಾಧ. ನಮ್ಮಲ್ಲಿರುವ ಜ್ಞಾನ ನಮ್ಮ ಮನಸ್ಸಾಕ್ಷಿಯ ಪ್ರಕಾರ ಇರುವ ಎಲ್ಲಾ ಅಡೆತಡೆಗಳನ್ನು ತೆಗೆದುಹಾಕಿ ನಮ್ಮನ್ನು ಸ್ವತಂತ್ರಗೊಳಿಸಿದ್ದರು, ಈ ಸ್ವಾತಂತ್ರ್ಯವನ್ನು ಉಪಯೋಗಿಸುವ ಮೊದಲು ಪ್ರೀತಿಯು ಅದನ್ನು ಅನುಮೋದಿಸಬೇಕು. ಪ್ರೀತಿಯು ನಮ್ಮ ಮೇಲೆ ಒಂದು ಬಲವಾದ ಆಜ್ಞೆಯನ್ನು ಹೇರುತ್ತದೆ. ಅದೇನಂದರೆ, ನಿನ್ನ ದೇವರಾದ ಯೆಹೋವನನ್ನು ಪೂರ್ಣ ಹೃದಯದಿಂದ ಪ್ರೀತಿಸಬೇಕು. ಹಾಗೆಯೇ, ನಿನ್ನ ನೆರೆಯವನನ್ನು ನಿನ್ನಂತೆಯೇ ಪ್ರೀತಿಸಬೇಕು ಎಂಬದೆ. ಹೀಗಿರುವಲ್ಲಿ ಜ್ಞಾನವಾಗಲಿ, ಸ್ವತಂತ್ರವಾಗಲಿ ಪ್ರಶ್ನೆಗಳಿಗೆ ಅಂತಿಮ ತೀರ್ಪು ಕೊಡುವದಿಲ್ಲ; ಪ್ರೀತಿಯು ಕೊಡುವದು-Z ’03, 43 (ಖ 3144).

* * *　　　* * *　　　* * *